KAHS610039352017

**1 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ.**

**ಉಪಸ್ಥಿತರು : ಶ್ರೀ ಪುರುಷೋತ್ತಮ ಟಿ.ಪಿ. ಬಿ.ಎ., ಎಲ್.ಎಲ್.ಬಿ.**
1 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

**ಸಿ.ಸಿ. ಸಂಖ್ಯೆ 1604/2017**

**ದಿನಾಂಕ :23 ನೇ ಜೂನ್ 2026**

**ಫಿರ್ಯಾದಿದಾರರು :** ಕರ್ನಾಟಕ ಸರ್ಕಾರ,
ಆರಕ್ಷಕ ಉಪ ನಿರೀಕ್ಷಕರು,
ಚನ್ನರಾಯಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆ.

**(ಸಹಾಯಕ ಸರ್ಕಾರಿ ಅಭಿಯೋಜಕರಿಂದ)**

**ವಿರುದ್ಧ**

**ಆರೋಪಿ/ಗಳು :**

1. ಗಾಯತ್ರಿ ಕೋಂ ಮಂಜೇಗೌಡ
   ಸುಮಾರು 50 ವರ್ಷ ವಯಸ್ಸು,

2. ಶಿವಮ್ಮ ಕೋಂ ಪುಟ್ಟೇಗೌಡ
   ಸುಮಾರು 45 ವರ್ಷ ವಯಸ್ಸು,

3. ಧರ್ಮ ಬಿನ್ ಲೇಟ್ ಮಳಲಿಗೌಡ
   ಸುಮಾರು 48 ವರ್ಷ ವಯಸ್ಸು,

4. ತುಳಸಿ ಕೋಂ ಧರ್ಮ
   ಸುಮಾರು 35 ವರ್ಷ ವಯಸ್ಸು,

5. ಜಗದೀಶ ಬಿನ್ ಲೇಟ್ ಮಳಲಿಗೌಡ,
ಸುಮಾರು 50 ವರ್ಷ ವಯಸ್ಸು,

6. ಮೀನಾಕ್ಷಿ ಕೋಂ ಜಗದೀಶ
ಸುಮಾರು 38 ವರ್ಷ ವಯಸ್ಸು
ಎಲ್ಲರ ವಾಸಃ ತರಬೇನಹಳ್ಳಿ ಗ್ರಾಮ,
ದಂಡಿಗನಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**(ಶ್ರೀ ಜಿ.ಎನ್.ಆರ್. ವಕೀಲರಿಂದ)**

| | | |
|---|---|---|
| 1. ಘಟನೆ ಸಂಭವಿಸಿದ ದಿನಾಂಕ | ಃ | 13.09.2017 |
| 2. ಘಟನೆ ವರದಿಯಾದ ದಿನಾಂಕ | ಃ | 14.09.2017 |
| 3. ಫಿರ್ಯಾದಿದಾರರ ಹೆಸರು | ಃ | ಹೊನ್ನೇಗೌಡ |
| 4. ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | ಃ- | 16-07-2025 |
| 5. ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | ಃ | 14-04-2026 |
| ಆಪಾದಿಸಲಾದ ಆಪಾದನೆಗಳು | ಃ- | ಭಾರತೀಯ ದಂಡ ಸಂಹಿತೆ ಕಲಂ. 143, 341, 504, 323, 324, ಮತ್ತು 506 ಸಹವಾಚಕ ಕಲಂ 149 |
| 6. ನ್ಯಾಯಾಧೀಶರ ಅಭಿಪ್ರಾಯ | - | ಕೊನೆಯ ಆದೇಶದಂತೆ. |

## ಃಃ **ತೀರ್ಪು** ಃಃ

ಆರಕ್ಷಕ ನಿರೀಕ್ಷಕರು, ಚನ್ನರಾಯಪಟ್ಟಣ ಗ್ರಾಮಾಂತರ ಪೊಲೀಸ್, ಹಾಸನ ಜಿಲ್ಲೆ ರವರು ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ. 143, 341, 504, 323, 324, ಮತ್ತು 506 ಸಹವಾಚಕ ಕಲಂ 149 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಮಾಡಿದ್ದಾರೆಂದು ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಣೆ :-**

ದಿನಾಂಕ 13-09-2017 ರಂದು ಮಧ್ಯಾಹ್ನ ಸುಮಾರು 3 ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ, ತರಬೇನಹಳ್ಳಿ ಗ್ರಾಮದಲ್ಲಿ ಚಾಸಾ-1 ರವರು ತಮ್ಮ ಜಮೀನಿಗೆ ಹೋಗಲು ತಮ್ಮ ಗ್ರಾಮದ ಮಂಜೇಗೌಡರ ತೆಂಗಿನ ತೋಟದ ಮುಂಭಾಗ ರಸ್ತೆಯಲ್ಲಿ ಹೋಗುತ್ತಿರುವಾಗ, ಅದೇ ವೇಳೆಗೆ ಜಮೀನಿನ ಕಡೆಯಿಂದ ಮನೆಯ ಕಡೆಗೆ ಹೋಗಲು ಬರುತ್ತಿದ್ದ ಆರೋಪಿತರುಗಳು ಹಳೆಯ ದ್ವೇಷವನ್ನು ಮನಸ್ಸಿನಲ್ಲಿಟ್ಟುಕೊಂಡು ಅಕ್ರಮ ಕೂಟದ ಗುಂಪುಕಟ್ಟಿಕೊಂಡು ಬಂದು ಚಾಸಾ-1 ರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ತಡೆದು, ಏನ್ಲಾ ನನ್ನ ಮಗನೇ ಜಮೀನನ್ನು ಉಳುಮೆ ಮಾಡಿಸಿದ್ದೀಯಾ ಎಂದು ಜಮೀನಿನ ವಿಷಯದಲ್ಲಿ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು, ಕೈಗಳಿಂದ ಮೈಮೇಲೆ ಹೊಡೆದು ನೋವುಂಟು ಮಾಡಿ, 1, 2, 4, ಮತ್ತು 6 ನೇ ಆರೋಪಿತರುಗಳು ಪುನಃ ಮಧ್ಯಾಹ್ನ ಸುಮಾರು 4 ಗಂಟೆ ಸಮಯದಲ್ಲಿ ಚಾಸಾ-2 ರವರೊಂದಿಗೆ ಜಮೀನಿನ ವಿಚಾರದಲ್ಲಿ ಜಗಳ ತೆಗೆದು ಚಾಸಾ-2 ರವರನ್ನು ಹಿಡಿದು ಎಳೆದಾಡಿ ಕೈಯಿಂದ ಮೈಮೇಲೆ ಹೊಡೆದು ನೋವುಂಟು ಮಾಡಿದ್ದು, 5ನೇ ಆರೋಪಿತ ದೊಣ್ಣೆಯಿಂದ ಚಾಸಾ-1 ರವರ ಬೆನ್ನಿಗೆ, ಮೈಮೇಲೆ ಹೊಡೆದು ನೋವುಂಟು ಮಾಡಿದ್ದು, 4ನೇ ಆರೋಪಿತಳು ಚಾಸಾ-2 ರವರ ರವಿಕೆಯನ್ನು ಹರಿದು ಹಾಕಿದ್ದು, 1ನೇ ಆರೋಪಿತಳು ಚಾಸಾ- 1 ರವರಿಗೆ ದೊಣ್ಣೆಯಿಂದ ಮೈಮೇಲೆ, ತಲೆಗೆ ಹೊಡೆದು ನೋವುಂಟು ಮಾಡಿದ್ದು, ಚಾಸಾ-2 ರವರಿಗೆ ಲೇ ಮುಂಡೆ ನೀವು ಜಮೀನಿನ ಹತ್ತಿರ ಬಂದರೆ ಹೆಂಗಸರೆಲ್ಲರೂ ಸೇರಿಕೊಂಡು ನಿನ್ನ ಗಂಡ ಮತ್ತು ನಿನ್ನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುವುದರಿಂದ, ಸದರಿ ಆರೋಪಿತರುಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಕೋರಿದ್ದು, ಸದರಿ ದೂರನ್ನು ಆಧರಿಸಿ ಆರೋಪಿತರ ವಿರುದ್ಧ ಪ್ರ.ವ.ವರದಿಯನ್ನು ದಾಖಲಿಸಿ, ನಂತರ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ.

**3.** ಆರೋಪಿತರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, ದಂಡ ಪ್ರಕ್ರಿಯಾ

ಸಂಹಿತೆ ಕಲಂಃ207 ರ ಪ್ರಕಾರ ಅಭಿಯೋಜನೆಯ ಪ್ರಕರಣದ ಪ್ರತಿಗಳನ್ನು ಆರೋಪಿತರಿಗೆ ಪೂರೈಸಲಾಯಿತು. ಆರೋಪಿತರು ಆಪಾದನೆಯನ್ನು ಅಲ್ಲಗಳೆದು ತಪ್ಪು ಮಾಡಿಲ್ಲ, ಪ್ರಕರಣ ವಿಚಾರಣೆ ಆಗಬೇಕೆಂದು ಕೇಳಿರುತ್ತಾರೆ. ಆದ್ದರಿಂದ ಅಭಿಯೋಜನೆಯ ಪರ ಸಾಕ್ಷಿದಾರರಿಗೆ ತಮ್ಮ ಸಾಕ್ಷ್ಯ ನೀಡಲು ನ್ಯಾಯಾಲಯಕ್ಕೆ ಹಾಜರಾಗುವಂತೆ ಸಮನ್ಸ್ ನೀಡಲಾಯಿತು. ಅಭಿಯೋಜನೆಯು ತಮ್ಮ ಪರವಾಗಿ ಸಾಕ್ಷಿದಾರರಾದ ಚಾಸಾ. 1, 2, 7, 5, 9, 4, 8, 6 ಮತ್ತು 3 ರವರನ್ನು ಪ್ರಾಸಾ.1 ರಿಂದ 9 ಎಂದು ವಿಚಾರಣೆಗೊಳಪಡಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ಒಟ್ಟು 7 ದಾಖಲೆಯನ್ನು ನಿಪಿ.1 ರಿಂದ7 ಎಂದು ಗುರುತಿಸಲಾಗಿರುತ್ತದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂಃ 313 ರಡಿಯಲ್ಲಿ ಆರೋಪಿತ ಹೇಳಿಕೆಗಳನ್ನು ಪಡೆಯಲಾಯಿತು. ಆರೋಪಿತರು ತಮ್ಮ ಪರವಾಗಿ ಸಾಕ್ಷಿ ವಿಚಾರಣೆಗೆ ಮುಂದಾಗಿರುವುದಿಲ್ಲ.

**4.** ಅಭಿಯೋಜನೆಯ ಪರ ಹಾಗೂ ಆರೋಪಿ ಪರ ವಕೀಲರ ವಾದಗಳನ್ನು ಕೇಳಲಾಯಿತು.

**5.** ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

**ಅಂಶ :1** ದಿನಾಂಕ-13-09-2017 ರಂದು ಮಧ್ಯಾಹ್ನ ಸುಮಾರು 3 ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ, ತರಬೇನಹಳ್ಳಿ ಗ್ರಾಮದಲ್ಲಿ ಚಾಸಾ-1 ರವರು ತಮ್ಮ ಜಮೀನಿಗೆ ಹೋಗಲು ತಮ್ಮ ಗ್ರಾಮದ ಮಂಜೇಗೌಡರ ತೆಂಗಿನ ತೋಟದ ಮುಂಭಾಗ ರಸ್ತೆಯಲ್ಲಿ ಹೋಗುತ್ತಿರುವಾಗ, ಅದೇ ವೇಳೆಗೆ ಜಮೀನಿನ ಕಡೆಯಿಂದ ಮನೆಯ ಕಡೆಗೆ ಹೋಗಲು ಬರುತ್ತಿದ್ದ ಆರೋಪಿತರುಗಳು ಹಳೆಯ ದ್ವೇಷವನ್ನು ಮನಸ್ಸಿನಲ್ಲಿಟ್ಟುಕೊಂಡು ಅಕ್ರಮ ಕೂಟ ಗುಂಪುಕಟ್ಟಿಕೊಂಡು ಬಂದಿದ್ದು, ಆ ಮೂಲಕ ಆರೋಪಿಯು **ಭಾ.ದಂ.ಸಂ. ಕಲಂಃ 143 ಸಹವಾಚಕ ಕಲಂ 149 ರಡಿಯಲ್ಲಿ** ಶಿಕ್ಷಾರ್ಹವಾದ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುವುದೇ ?

**ಅಂಶ : 2** ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೊಪಿತರುಗಳು ಸಮಾನ ಉದ್ದೇಶದಿದ ಜಗಳ ತೆಗೆದು, ಚಾಸಾ-1 ರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ತಡೆದಿದ್ದು, ಆ ಮೂಲಕ ಆರೋಪಿಯು **ಭಾ.ದಂ.ಸಂ. ಕಲಂಃ 341 ಸಹವಾಚಕ ಕಲಂ 149 ರಡಿಯಲ್ಲಿ** ಶಿಕ್ಷಾರ್ಹವಾದ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುವುದೇ ?

**ಅಂಶ : 3** ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೊಪಿತರುಗಳು ಸಮಾನ ಉದ್ದೇಶದಿದ ಜಗಳ ತೆಗೆದು ಚಾಸಾ-1 ರವರನ್ನು ಏನಲ್ಲ ನನ್ನ ಮಗನೇ ಜಮೀನನ್ನು ಉಳುಮೆ ಮಾಡಿಸಿದ್ದೀಯಾ ಎಂದು ಜಮೀನಿನ ವಿಷಯದಲ್ಲಿ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಆರೋಪಿಯು **ಭಾ.ದಂ.ಸಂ. ಕಲಂಃ 504 ಸಹವಾಚಕ ಕಲಂ 149 ರಡಿಯಲ್ಲಿ** ಶಿಕ್ಷಾರ್ಹವಾದ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುವುದೇ ?

**ಅಂಶ : 4** ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೊಪಿತರುಗಳು ಸಮಾನ ಉದ್ದೇಶದಿಂದ ಜಗಳ ತೆಗೆದು, 1, 2, 4, ಮತ್ತು 6 ನೇ ಆರೋಪಿತರುಗಳು ಪುನಃ ಮಧ್ಯಾಹ್ನ ಸುಮಾರು 4 ಗಂಟೆ ಸಮಯದಲ್ಲಿ ಚಾಸಾ-2 ರವರೊಂದಿಗೆ ಜಮೀನಿನ ವಿಚಾರದಲ್ಲಿ ಜಗಳ ತೆಗೆದು ಚಾಸಾ-2 ರವರನ್ನು ಹಿಡಿದು ಎಳೆದಾಡಿ ಕೈಯಿಂದ ಮೈಮೇಲೆ ಹೊಡೆದು ಒಳನೋವುಂಟು ಮಾಡಿದ್ದು, ಆ ಮೂಲಕ ಆರೋಪಿಯು **ಭಾ.ದಂ.ಸಂ. ಕಲಂಃ 323 ಸಹವಾಚಕ ಕಲಂ 149 ರಡಿಯಲ್ಲಿ** ಶಿಕ್ಷಾರ್ಹವಾದ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುವುದೇ ?

**ಅಂಶ : 5** ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೊಪಿತರುಗಳು ಸಮಾನ ಉದ್ದೇಶದಿಂದ ಜಗಳ ತೆಗೆದು, 1ನೇ ಆರೋಪಿತಳು ಚಾಸಾ- 1 ರವರಿಗೆ ದೊಣ್ಣೆಯಿಂದ ಮೈಮೇಲೆ, ತಲೆಗೆ ಹೊಡೆದು ನೋವುಂಟು ಮಾಡಿದ್ದು, ಆ ಮೂಲಕ ಆರೋಪಿಯು **ಭಾ.ದಂ.ಸಂ. ಕಲಂಃ 324 ಸಹವಾಚಕ ಕಲಂ**

**149 ರಡಿಯಲ್ಲಿ** ಶಿಕ್ಷಾರ್ಹವಾದ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುವುದೇ ?

**ಅಂಶ : 6** ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೊಪಿತರುಗಳು ಸಮಾನ ಉದ್ದೇಶದಿಂದ ಜಗಳ ತೆಗೆದು, ಆರೋಪಿತರುಗಳು ಲೇ ಮುಂಡೆ ನೀವು ಜಮೀನಿನ ಹತ್ತಿರ ಬಂದರೆ ಹೆಂಗಸರೆಲ್ಲರೂ ಸೇರಿಕೊಂಡು ನಿನ್ನ ಗಂಡ ಮತ್ತು ನಿನ್ನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಯು **ಭಾ.ದಂ.ಸಂ. ಕಲಂಃ 506 ಸಹವಾಚಕ ಕಲಂ 149 ರಡಿಯಲ್ಲಿ** ಶಿಕ್ಷಾರ್ಹವಾದ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುವುದೇ ?

**ಅಂಶ : 7** ಯಾವ ಆದೇಶ ?

**6.** ಈ ಮೇಲಿನ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

**ಅಂಶ : 1 ರಿಂದ 6** ಃ **ನಕಾರಾತ್ಮಕವಾಗಿ**
**ಅಂಶ : 7** ಃ **ಅಂತಿಮ ಆದೇಶದಂತೆ**

ಈ ಕೆಳಕಂಡ ಕಾರಣಗಳಿಗಾಗಿ,

## ಃಃ **ಕಾರಣಗಳು** ಃಃ

**7. ಅಂಶ ಸಂಖ್ಯೆ 1 ರಿಂದ 6**:- ಸದರಿ ಎರಡು ಅಂಶಗಳು ಒಂದಕ್ಕೊಂದು ಪರಸ್ಪರ ಪೂರಕವಾಗಿರುವುದರಿಂದ ಚರ್ಚೆಯ ವೇಳೆ ಅಂಶಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಸದರಿ ಅಂಶಗಳನ್ನು ರುಜುವಾತುಪಡಿಸುವ ಹೊಣೆಯು ಅಭಿಯೋಜನೆಯ ಮೇಲಿದ್ದು, ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯ ನಿರ್ಧಿಷ್ಟ ಆರೋಪವೇನೆಂದರೆ, ದಿನಾಂಕ 13-09-2017 ರಂದು ಮಧ್ಯಾಹ್ನ ಸುಮಾರು 3 ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ, ತರಬೇನಹಳ್ಳಿ ಗ್ರಾಮದಲ್ಲಿ ಚಾಸಾ-1 ರವರು ತಮ್ಮ

ಜಮೀನಿಗೆ ಹೋಗಲು ತಮ್ಮ ಗ್ರಾಮದ ಮಂಜೇಗೌಡರ ತೆಂಗಿನ ತೋಟದ ಮುಂಭಾಗ ರಸ್ತೆಯಲ್ಲಿ ಹೋಗುತ್ತಿರುವಾಗ, ಅದೇ ವೇಳೆಗೆ ಜಮೀನಿನ ಕಡೆಯಿಂದ ಮನೆಯ ಕಡೆಗೆ ಹೋಗಲು ಬರುತ್ತಿದ್ದ ಆರೋಪಿತರುಗಳು ಹಳೆಯ ದ್ವೇಷವನ್ನು ಮನಸ್ಸಿನಲ್ಲಿಟ್ಟುಕೊಂಡು ಅಕ್ರಮ ಕೂಟದ ಗುಂಪುಕಟ್ಟಿಕೊಂಡು ಬಂದು ಚಾಸಾ-1 ರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ತಡೆದು, ಏನಾಲ್ಲ ನನ್ನ ಮಗನೇ ಜಮೀನನ್ನು ಉಳುಮೆ ಮಾಡಿಸಿದ್ದೀಯಾ ಎಂದು ಜಮೀನಿನ ವಿಷಯದಲ್ಲಿ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು, ಕೈಗಳಿಂದ ಮೈಮೇಲೆ ಹೊಡೆದು ನೋವುಂಟು ಮಾಡಿ, 1, 2, 4, ಮತ್ತು 6 ನೇ ಆರೋಪಿತರುಗಳು ಪುನಃ ಮಧ್ಯಾಹ್ನ ಸುಮಾರು 4 ಗಂಟೆ ಸಮಯದಲ್ಲಿ ಚಾಸಾ-2 ರವರೊಂದಿಗೆ ಜಮೀನಿನ ವಿಚಾರದಲ್ಲಿ ಜಗಳ ತೆಗೆದು ಚಾಸಾ-2 ರವರನ್ನು ಹಿಡಿದು ಎಳೆದಾಡಿ ಕೈಯಿಂದ ಮೈಮೇಲೆ ಹೊಡೆದು ನೋವುಂಟು ಮಾಡಿದ್ದು, 5ನೇ ಆರೋಪಿತ ದೊಣ್ಣೆಯಿಂದ ಚಾಸಾ-1 ರವರ ಬೆನ್ನಿಗೆ, ಮೈಮೇಲೆ ಹೊಡೆದು ನೋವುಂಟು ಮಾಡಿದ್ದು, 4ನೇ ಆರೋಪಿತಳು ಚಾಸಾ-2 ರವರ ರವಿಕೆಯನ್ನು ಹರಿದು ಹಾಕಿದ್ದು, 1ನೇ ಆರೋಪಿತಳು ಚಾಸಾ- 1 ರವರಿಗೆ ದೊಣ್ಣೆಯಿಂದ ಮೈಮೇಲೆ, ತಲೆಗೆ ಹೊಡೆದು ನೋವುಂಟು ಮಾಡಿದ್ದು, ಚಾಸಾ-2 ರವರಿಗೆ ಲೇ ಮುಂಡೆ ನೀವು ಜಮೀನಿನ ಹತ್ತಿರ ಬಂದರೆ ಹೆಂಗಸರೆಲ್ಲರೂ ಸೇರಿಕೊಂಡು ನಿನ್ನ ಗಂಡ ಮತ್ತು ನಿನ್ನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂಬುದಾಗಿರುತ್ತದೆ.

**8.** ಸದರಿ ಆರೋಪಣೆಯನ್ನು ರುಜುವಾತುಪಡಿಸಲು ಅಭಿಯೋಜನೆಯು ಪ್ರಾಸಾ.1 ರವರ ಸಾಕ್ಷ್ಯವನ್ನು ಅವಲಂಬಿಸಿರುತ್ತದೆ. ಸದರಿ ಆರೋಪಣೆಯನ್ನು ರುಜುವಾತುಪಡಿಸಲು ಅಭಿಯೋಜನೆಯು ಪ್ರಾಸಾ.1 ರಿಂದ 9 ರವರ ಸಾಕ್ಷ್ಯವನ್ನು ಅವಲಂಬಿಸಿರುತ್ತದೆ. ಚಾಸಾ.1/ಪ್ರಾಸಾ.1 ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ತನಗೆ ಆರೋಪಿತರು ಗೊತ್ತು. ಚಾಸ2- ನನ್ನ ಹೆಂಡತಿ ಚಾಸ-3 ಮತ್ತು 4 ನಮ್ಮ ಪಕ್ಕದ ಊರಿನವರು. 7 ರಿಂದ 8 ವರ್ಷಗಳ ಹಿಂದೆ ನಾನು ಹೊಲದಿಂದ ಬರುತ್ತಿದ್ದಾಗ, ಆರೋಪಿತರು ಬಂದು ಕಲ್ಲು, ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. 5 ನೇ ಆರೋಪಿ ಕುತ್ತಿಗೆಗೆ ಹೊಡೆದಿರುತ್ತಾರೆ. ಉಳಿದ ಆರೋಪಿತರು ಕಲ್ಲಿನಿಂದ ಮೈಕೈಗೆ

ಹೊಡೆದಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾಲುಗಳಿಂದ ಆರೋಪಿತರು ಹಲ್ಲೆ ಮಾಡಿರುತ್ತಾರೆ. 2 ನೇ ಆರೋಪಿ ನನ್ನ ಹೆಂಡತಿಗೆ ಮನೆಯಲ್ಲಿ ಕಲ್ಲಿನಿಂದ ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾಲುಗಳನ್ನು ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು. ಮಾರನೆ ದಿನ ನಾನು ಪೋಲೀಸರಿಗೆ ದೂರು ನೀಡಿರುತ್ತೇನೆ. ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಮಿ-1(ಎ) ಎಂದು ಗುರುತಿಸಲಾಯಿತು. ಪೋಲೀಸರು ಮಹಜರ್ ಗೆ ಬಂದು ಮಹಜರ್ ಮಾಡಿ, ನನ್ನ ಸಹಿ ಪಡೆದಿರುತ್ತಾರೆ. ಮಹಜರ್ ಅನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪೋಲೀಸರು ನಿಪಿ.2 ರ ಕಾಲಕ್ಕೆ ನನ್ನ ಸಹಿ ಮಾತ್ರ ಪಡೆದಿರುತ್ತಾರೆ ಅದನ್ನು ಬಿಟ್ಟು ಬೇರೆ ಏನನ್ನೂ ವಶಪಡಿಸಿಕೊಂಡಿಲ್ಲ. ನಿಪಿ-2 ಕ್ಕೆ ಕಮಲಮ್ಮ ಸಹಿ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**9**. ಪ್ರಾಸಾ 1 ರವರನ್ನು ಮಾನ್ಯ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೊಳಪಡಿಸಿದ್ದು, ನಾನು ನಮ್ಮೂರಿನ ಮಂಜೇಗೌಡರ ಹೆಂಡತಿ ಗಾಯತ್ರಿಯ 1 ನೇ ಆರೋಪಿ ಬಳಿ 1,38,000/- ಹಣ ನೀಡಿ 1 ಎಕರೆ ಜಮೀನನ್ನು ಖರೀದಿಸಿದ್ದೆನು ಎಂದರೆ ಸರಿ. ಸದರಿ 1 ನೇ ಆರೋಪಿಯವರು ನನಗೆ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಸದರಿ ಜಮೀನನ್ನು ನೋಂದಣಿ ಮಾಡಿಸಿಕೊಟ್ಟಿರಲಿಲ್ಲ. ಅದನ್ನು ಕೇಳಿದಾಗ ಅವರು ನನ್ನ ಗಂಡನಿಂದ ಪೌತಿ ಖಾತೆ ಮಾಡಿಸಿಕೊಂಡು, ನಂತರ ನಿಮಗೆ ನೋಂದಣಿ ಮಾಡಿಸಿಕೊಡುತ್ತೇನೆ ಎಂದು ತಿಳಿಸಿ, ಮಾಡಿಸಿಕೊಟ್ಟಿರಲಿಲ್ಲ ಎಂದರೆ ಸರಿ. ದಿ: 13-09-2017 ರಂದು ಮಧ್ಯಾಹ್ನ 3 ಗಂಟೆ ಸಮಯದಲ್ಲಿ ನಮ್ಮ ತೆಂಗಿನ ತೋಟಕ್ಕೆ ಹೋಗುತ್ತಿದ್ದಾಗ, ಅದೇ ವೇಳೆಗೆ ಆರೋಪಿತರು ನನ್ನನ್ನು ಅಡ್ಡಗಟ್ಟಿ, ಅವಾಚ್ಯ ಶಬ್ದಗಳಿಂದ ಬೈದು, 5 ನೇ ಆರೋಪಿ ದೊಣ್ಣೆಯಿಂದ ನನ್ನ ಬೆನ್ನಿಗೆ ಹೊಡೆದರು ಎಂದರೆ ಸರಿ. ಎಲ್ಲಾ ಆರೋಪಿತರು ಕೈಯಿಂದ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. ನಂತರ

ಮದ್ಯಾಹ್ನ 4 ಗಂಟೆಗೆ ಮನೆ ಬಳಿ ಆರೋಪಿತರು ಬಂದು ನನ್ನ ಹೆಂಡತಿಗೆ ಆರೋಪಿತರು ಮೈಮೇಲೆ ಹೊಡೆದು, ರವಿಕೆಯನ್ನು ಹರಿದು ಹಾಕಿದರು ಎಂದರೆ ಸರಿ. 1 ನೇ ಆರೋಪಿ ದೊಣ್ಣೆಯಿಂದ ನನ್ನ ಮೈಮೇಲೆ, ತಲೆಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿ. 2 ನೇ ಆರೋಪಿ ಕಲ್ಲಿನಿಂದ ಹಲ್ಲೆ ಮಾಡಿದರು ಎಂದರೆ ಸರಿ. ಕಮಲಮ್ಮ ಶ್ರೀನಿವಾಸ ಜಗಳ ಬಿಡಿಸಿದರು ಎಂದರೆ ಸರಿ. ಆರೋಪಿತರು ನಿನ್ನನ್ನು ಮುಗಿಸುತ್ತೇವೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**10**. ಪ್ರಾಸಾ 1 ರವರನ್ನು ಆರೋಪಿತ ಪರ ವಕೀಲರು ಪಾಟೀ ಸವಾಲಿಗೊಳಪಡಿಸಿದ್ದು, ಆರೋಪಿತರು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿ. ನನ್ನ ಮತ್ತು ಆರೋಪಿತರ ನಡುವೆ ಸಿವಿಲ್ ವ್ಯಾಜ್ಯಗಳು ಇವೆ ಎಂದರೆ ಸರಿ. ನನ್ನ ಅಣ್ಣ ನಾಗರಾಜು 1 ನೇ ಆರೋಪಿಯ ಮೇಲೆ ಸಿವಿಲ್ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿ. ಜಮೀನು ನಮ್ಮ ಊರಿನಿಂದ 1 ಕಿ.ಮೀ ದೂರದಲ್ಲಿದೆ. ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ಗಲಾಟೆ ಮಾಡಿದ ದಿನಾಂಕ, ತಿಂಗಳು, ವರ್ಷ ನನಗೆ ಮರೆತು ಹೋಗಿದೆ. ದೂರಿನಲ್ಲಿರುವ ವಿಚಾರಗಳನ್ನು ಓದಿ ತಿಳಿದುಕೊಂಡಿಲ್ಲ. ನಿಪಿ-2 ರಲ್ಲಿರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**11**. ಚಾ.ಸಾ.2/ಪ್ರಾಸಾ.2 ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ನನಗೆ ಆರೋಪಿತರು ಗೊತ್ತು. ಚಾಸ-1 ನನ್ನ ಗಂಡ. ಚಾಸ-3, 4 ನಮ್ಮ ಪಕ್ಕದ ಊರಿನವರು. 4 ವರ್ಷಗಳ ಹಿಂದೆ ನನ್ನ ಗಂಡ ಹೊಲದ ಬಳಿ ಇದ್ದಾಗ, ಆರೋಪಿತರು ನನ್ನ ಗಂಡನ ಮೇಲೆ ಹಲ್ಲೆ ಮಾಡಿ, ಸಂಜೆ 4 ಗಂಟೆಗೆ ಮನೆಯ ಹತ್ತಿರ ಬಂದು ನಾನು ಮನೆಯಲ್ಲಿದ್ದಾಗ, ಆರೋಪಿತರು ಕಲ್ಲು ಮತ್ತು ದೊಣ್ಣೆಯಿಂದ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ. 2 ಮತ್ತು 6 ನೇ ಆರೋಪಿ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ. 1 ನೇ

ಆರೋಪಿ ಕುಡುಗೋಲಿನಿಂದ ಕತ್ತರಿಸುತ್ತೇನೆ ಎಂದು ಬೆನ್ನು, ಮೈಕೈ ಮತ್ತು ಎಡಕೈಗೆ ಹೊಡೆದಿರುತ್ತಾರೆ. ಯಾರೂ ಬಂದು ಗಲಾಟೆ ಬಿಡಿಸಿರುವುದಿಲ್ಲ. ನಂತರ ಅದೇ ದಿನ ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. 1 ನೇ ಆರೋಪಿ ಬಳಿ 1,38,000 ಹಣ ನೀಡಿ 1 ಎಕರೆ ಜಮೀನನ್ನು ಖರೀದಿಸಿದ್ದೆವು, ಅದೇ ವಿಚಾರವಾಗಿ ಗಲಾಟೆಯಾಗಿರುತ್ತದೆ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದೆ. ಸದರಿ ದಾಖಲೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-3 ಕ್ಕೆ ನಾನಲ್ಲದೆ ದೇವರಾಜು, ಅಶೋಕ ಸಹಿ ಮಾಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾಲುಗಳನ್ನು ಪೋಲೀಸರು ಮಹಜರ್ ಕಾಲಕ್ಕೆ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**12**. ಪ್ರಾಸಾ 2 ರವರನ್ನು ಮಾನ್ಯ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೊಳಪಡಿಸಿದ್ದು, ನಾನು ನಮ್ಮೂರಿನ ಮಂಜೇಗೌಡರ ಹೆಂಡತಿ ಗಾಯತ್ರಿಯು 1 ನೇ ಆರೋಪಿ ಬಳಿ 1,38,000 ಹಣ ನೀಡಿ 1 ಎಕರೆ ಜಮೀನನ್ನು ಖರೀದಿಸಿದ್ದೆವು ಎಂದರೆ ಸರಿ. ಸದರಿ 1 ನೇ ಆರೋಪಿತೆಯವರು ತಮಗೆ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಸದರಿ ಜಮೀನನ್ನು ನೋಂದಣಿ ಮಾಡಿಕೊಟ್ಟಿರಲಿಲ್ಲ. ಅದನ್ನು ಕೇಳಿದಾಗ ಅವರು ತನ್ನ ಗಂಡನಿಂದ ಪೌತಿ ಖಾತೆ ಮಾಡಿಸಿಕೊಂಡು, ನಂತರ ನಿಮಗೆ ನೋಂದಣಿ ಮಾಡಿಸಿಕೊಡುತ್ತೇನೆ ಎಂದು ತಿಳಿಸಿ, ಮಾಡಿಸಿಕೊಟ್ಟಿರಲಿಲ್ಲ ಎಂದರೆ ಸರಿ. ದಿ:13-09-2017 ರಂದು ಮದ್ಯಾಹ್ನ 2 ಗಂಟೆ ಸಮಯದಲ್ಲಿ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ಆರೋಪಿ 1,2,4,6 ತನ್ನನ್ನು ಹಿಡಿದು ಎಳೆದಾಡಿದರು ಎಂದರೆ ಸರಿ. 4 ನೇ ಆರೋಪಿ ನನ್ನ ರವಿಕೆಯನ್ನು ಹರಿದು ಹಾಕಿದರು ಎಂದರೆ ಸರಿ. 1 ನೇ ಆರೋಪಿ ಬಿದಿರು ದೊಣ್ಣೆಯಿಂದ ತಲೆಗೆ, ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ಕಲ್ಲಿನಿಂದ ನಮ್ಮ ಮನೆಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿತರೆಲ್ಲರೂ ನನಗೆ ಜೀವ ಬೆದರಿಕೆ ಹಾಕಿದರು ಎಂದರೆ ಸರಿ. ಕಮಲಮ್ಮ ಶ್ರೀನಿವಾಸ ಜಗಳ ಬಿಡಿಸಿದರು ಎಂದರೆ

ಸರಿ. ಈ ರೀತಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ದಿನಾಂಕಃ 15-09-2017 ರಂದು ಘಟನಾ ಸ್ಥಳದಲ್ಲಿ 11.30 ರಿಂದ 12.30 ರವರೆಗೆ ನಿಪಿ3 ರಂತೆ ಮಹಜರ್ ಮಾಡಿ, ದೊಣ್ಣೆ ಕಲ್ಲು, ರವಿಕೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**13**. ಪ್ರಾಸಾ 2 ರವರನ್ನು ಆರೋಪಿತನ ಪರ ವಕೀಲರು ಪಾಟೀ ಸವಾಲಿಗೊಳಪಡಿಸಿದ್ದು, ಆರೋಪಿತರು ನಮ್ಮ ವಿರುದ್ಧ ಇದೇ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿ. ನನ್ನ ಮತ್ತು ಆರೋಪಿತರ ನಡುವೆ ಸಿವಿಲ್ ವ್ಯಾಜ್ಯಗಳು ಇವೆ ಎಂದರೆ ಸರಿ. ಅಂದಿನಿಂದ ಆರೋಪಿತರು ಮತ್ತು ನಮ್ಮ ನಡುವೆ ಮಾತುಕತೆ ಇಲ್ಲ ಎಂದರೆ ಸರಿ. ನನ್ನ ಭಾವ ನಾಗರಾಜು 1 ನೇ ಆರೋಪಿಯ ಮೇಲೆ ಸಿವಿಲ್ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿ. ನಾನು ಜಮೀನು ಹತ್ತಿರ ಹೋಗಿಲ್ಲ. ನನ್ನ ಗಂಡ ಹೊಲದ ಬಳಿ ಹೋದಾಗ ನಾನು ಮನೆ ಹತ್ತಿರ ಇದ್ದೆ. ಜಮೀನು ನಮ್ಮ ಮನೆಯಿಂದ 2 ಕಿ.ಮೀ ದೂರದಲ್ಲಿದೆ. ನಿಪಿ3 ರಲ್ಲಿ ಬರೆದಿರುವ ವಿಚಾರಗಳನ್ನು ನಾನು ತಿಳಿದುಕೊಂಡಿಲ್ಲ. ನಮೂರಿನಿಂದ ಚನ್ನರಾಯಪಟ್ಟಣಕ್ಕೆ 30 ಕಿ.ಮೀ ದೂರವಿದೆ. ಸಾತೇನಹಳ್ಳಿಯಲ್ಲಿ ಸರ್ಕಾರಿ ಆಸ್ಪತ್ರೆಯಿದೆ, ಆದರೆ ವೈದ್ಯರು ನಮಗೆ ಸಿಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಬರುವಾಗ ಠಾಣೆಯ ಮುಂಭಾಗದಲ್ಲಿಯೇ ಬಂದೆ ಎಂದರೆ ಸರಿ. ಹಲ್ಲೆಯಿಂದಾಗಿ ನನಗೆ ರಕ್ತ ಬಂದಿತ್ತು. ರಕ್ತವಾಗಿರುವ ಬಟ್ಟೆಯನ್ನು ನಾನು ಪೋಲೀಸರಿಗೆ ನೀಡಿಲ್ಲ. ನ್ಯಾಯಾಲಯದ ಮುಂದಿರುವ ಮು.ಮಾಲುಗಳು ಹಳ್ಳಿಗಳಲ್ಲಿ ಸಿಗುತ್ತವೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**14**. ಚಾಸಾ.7/ಪ್ರಾಸಾ.3 ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 13.09.2017 ರಂದು ಸಂಜೆ 4.30 ಗಂಟೆಯ ಸಮಯಕ್ಕೆ ಚಾಸ-2ರವರು ಹಲ್ಲೆಗೆ ಒಳಗಾಗಿರುತ್ತೇನೆಂದು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು, ನಾನು ಅವರನ್ನು

ಪರಿಕ್ಷಿಸಿದಾಗ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.1. ಎಡಮುಂಗೈನಲ್ಲಿ ತರಚಿದ ಗಾಯ, 2. ಬಲಮುಂಗೈನಲ್ಲಿ ತರುಚಿದ ಗಾಯಗಳು ಕಂಡುಬಂದಿರುತ್ತದೆ. ತನ್ನ ಅಭಿಪ್ರಾಯದಲ್ಲಿ ಸದರಿ ಗಾಯವು ಸಾಮಾನ್ಯ ಸ್ವರೂಪದ ಗಾಯ ಎಂದು ಅಭಿಪ್ರಾಯಪಟ್ಟು ಈ ಕುರಿತಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು ಅದನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ. ಅದನ್ನು ನಿಪಿ-4 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಯಾವುದೇ ಒಬ್ಬ ವ್ಯಕ್ತಿಗೆ ದೊಣ್ಣೆ ಹಾಗೂ ಕಲ್ಲಿನಿಂದ ಹೊಡೆದರೆ ನಿಪಿ-4 ರಲ್ಲಿ ತೋರಿಸಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ. ಸದರಿ ಗಾಯಗಳು ತಾಜಾ ಗಾಯಗಳು ಆಗಿರುತ್ತದೆ. ದಿಃ 13.09.2017 ರಂದು ಸಂಜೆ 4.30 ಗಂಟೆಯ ಸಮಯಕ್ಕೆ ಚಾಸ-1ರವರು ಹಲ್ಲೆಗೆ ಒಳಗಾಗಿರುತ್ತೇನೆಂದು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು, ನಾನು ಅವರನ್ನು ಪರಿಕ್ಷಿಸಿದಾಗ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.1. ಎದೆಯ ಮೂಳೆ ಭಾಗದಲ್ಲಿ ಮುಟ್ಟಿದಾಗ ನೋವು ಕಂಡುಬಂದಿರುತ್ತದೆ. ತನ್ನ ಅಭಿಪ್ರಾಯದಲ್ಲಿ ಸದರಿ ಗಾಯವು ಸಾಮಾನ್ಯ ಸ್ವರೂಪದ ಗಾಯ ಎಂದು ಅಭಿಪ್ರಾಯಪಟ್ಟು ಈ ಕುರಿತಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು ಅದನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ. ಅದನ್ನು ನಿಪಿ-5 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಯಾವುದೇ ಒಬ್ಬ ವ್ಯಕ್ತಿಗೆ ಕಲ್ಲಿನಿಂದ ಹೊಡೆದರೆ ನಿಪಿ-5 ರಲ್ಲಿ ತೋರಿಸಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ. ಸದರಿ ಗಾಯಗಳು ತಾಜಾ ಗಾಯಗಳು ಆಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**15**. ಪ್ರಾಸಾ 3 ರವರನ್ನು ಆರೋಪಿತನ ಪರ ವಕೀಲರು ಪಾಟೀ ಸವಾಲಿಗೊಳಪಡಿಸಿದ್ದು, ನಿಪಿ-4 ಮತ್ತು 5 ರಲ್ಲಿ ಗಾಯದ ಆಯಸ್ಸು ಹಾಗೂ ಬಣ್ಣ ನಮೂದು ಮಾಡಿಲ್ಲ ಎಂದರೆ ಸರಿ. ಜಮೀನಿನಲ್ಲಿ ಕೆಲಸ ಮಾಡುವಾಗ ಪೋದೆ ಮೇಲೆ ಬಿದ್ದರೆ ನಿಪಿ-4 ರಲ್ಲಿ ತೋರಿಸಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

ಚಾಸಾ-1 ರವರಿಗೆ X-ray ಮಾಡಿಸಿರುವುದಿಲ್ಲ ಎಂದರೆ ಸರಿ. ಚಾಸಾ-1ರವರು ಮುಟ್ಟಿದಾಗ ನೋವು ಎಂದು ಹೇಳಿದ್ದು ಅದರಂತೆ ನಿಪಿ-5 ರಲ್ಲಿ ನಮೂದು ಮಾಡಿರುತ್ತೆವೆ ಎಂದರೆ ಸರಿ. ಒಬ್ಬ ವ್ಯಕ್ತಿ ಗಟ್ಟಿಯಾದ ನೆಲದ ಮೇಲೆ ಬಿದ್ದಾಗ ಆ ರೀತಿ ನೋವು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**16**. ಚಾಸಾ.5/ಪ್ರಾಸಾ.4 ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ಈಗ ನೋಡುತ್ತಿರುವ ಸಹಿಯು ನನ್ನದಾಗಿರುತ್ತದೆ. ನಿಪಿ-2, 3 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಬಿ), 3(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು 2017 ರಲ್ಲಿ ಚಾಸಾ-1ರವರ ತೋಟದಲ್ಲಿ, ಚಾಸಾ-1ರವರು ತೋರಿಸಿದ ಸ್ಥಳದಲ್ಲಿ ಪೊಲೀಸ್ ರವರು ಮಹಜರ್ ಜರುಗಿಸಿದ್ದು ನಾನು ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ದೊಣ್ಣೆಯನ್ನು ಪೊಲೀಸ್ ರವರು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಮಹಜರ್ ಗೆ ಚಾಸಾ-1, 6 ಮತ್ತು ನಾನು ಸಹಿ ಮಾಡಿದ್ದು ಅದನ್ನು ಬೆ 10.30 ರಿಂದ 11.30ವರಿಗೂ ಜರುಗಿಸಿರುತ್ತಾರೆ. ನಿಪಿ-3 ನ್ನು ಚಾಸಾ-1 ರವರ ಮನೆಯ ಬಳಿ ಬೆಳಿಗ್ಗೆ 11.00 ರಿಂದ 12.00ವರಿಗೂ ಜರುಗಿಸಿದ್ದು ಸದರಿ ಸ್ಥಳವನ್ನು ಚಾಸಾ-2ರವರು ತೋರಿಸಿರುತ್ತಾರೆ. ನಿಪಿ-3 ನ್ನು ಜರುಗಿಸಿ ರವಿಕೆ, ದೊಣ್ಣೆ, ಕಲ್ಲನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ಗೆ ನನ್ನ ಜೊತೆ ಚಾಸಾ-2, 6 ಸಹಿ ಮಾಡಿರುತ್ತಾರೆ. ಸಾಕ್ಷಿಯು ಮುಮಾ-1 ರಿಂದ 4ನ್ನು ನೋಡಿ ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**17**. ಪ್ರಾಸಾ 4 ರವರನ್ನು ಮಾನ್ಯ ಸರ್ಕಾರಿ ಅಭಿಯೋಜಕರ ಪರ ವಕೀಲರು ಪಾಟೀ ಸವಾಲಿಗೊಳಪಡಿಸಿದ್ದು, ಮಹಜರ್ ನ್ನು 10.00 ರಿಂದ 10..45ವರಿಗೂ ಮಾಡಿರುತ್ತಾರೆ ಎಂದರೆ ಇರಬಹುದು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**18**. ಪ್ರಾಸಾ 4 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲಿಗೊಳಪಡಿಸಿದ್ದು, ನಾನೇ ಸ್ಥಳಕ್ಕೆ ಹೋಗಿರುತ್ತೇನೆ. ನಿಪಿ-2, 3 ನ್ನು ಜರುಗಿಸಿದ

ಜಮೀನಿನ ಸ.ನಂ ನನಗೆ ಗೊತ್ತಿಲ್ಲ. ನಿಪಿ-2, 3 ರಲ್ಲಿ ಇರುವ ವಿಚಾರವನ್ನು ನಾನು ತಿಳಿದುಕೊಂಡಿರುವುದಿಲ್ಲ. ಚಾಸಾ-1, 2 ರವರು ನನ್ನ ಸಂಬಂಧಿಕರು ಎಂದರೆ ಸರಿ. ಚಾಸಾ-1, 2 ರವರು ನಮಗೆ ಹಲ್ಲೆ ಮಾಡಿರುತ್ತಾರೆ ಎಂದು ಆರೋಪಿತರು ದೂರು ನೀಡಿದ್ದು ಪ್ರಕರಣ ದಾಖಲಾಗಿದೆ ಎಂದರೆ ಸರಿ. ಕಲ್ಲನ್ನು ಚಾಸಾ-1 ರವರು ಪೊಲೀಸ್ ರವರಿಗೆ ನೀಡಿರುತ್ತಾರೆ. ಗಲಾಟೆಯಾದ ದಿನವೇ ಸ್ಥಳಕ್ಕೆ ಪೊಲೀಸ್ ರವರು ಬಂದು ಮಹಜರ್ ಜರುಗಿಸಿರುತ್ತಾರೆ. ಸದರಿ ಕಲ್ಲುಗಳು ಜಮೀನಿನ ಬಳಿ ಸಿಗುತ್ತದೆ ಎಂದರೆ ಸರಿ. ಸದರಿ ಕಲ್ಲಿನ ಮೇಲೆ ವಿಶೇಷ ಗುರುತನ್ನು ನಾನು ಇಟ್ಟುಕೊಂಡಿರುವುದಿಲ್ಲ. ನನ್ನ ಸಮಕ್ಷಮ ಪಂಚರು ಸಹಿ ಮಾಡಿರುವ ಚೀಟಿಯನ್ನು ಮುಮಾಗಳ ಮೇಲೆ ಅಂಟಿಸಿರುವುದಿಲ್ಲ. ಮಹಜರ್ ನ್ನು ಜರುಗಿಸಿದ ಮನೆ ನಂಜೇಶಿಗೌಡರವರಿಗೆ ಸೇರಿದ್ದು ಅದರಲ್ಲಿ ಚಾಸಾ-1, 2 ರವರು ಬಾಡಿಗೆಗೆ ಇದ್ದಾರೆ. ಮಹಜರ್ ನಲ್ಲಿ ಸದರಿ ವಿಚಾರವನ್ನು ನಮೂದು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮನೆಯ ನಂ ಮತ್ತು ಸ್ಥಳದ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸ್ಥಳದಲ್ಲಿ ನೀಡಿದ ರವಿಕೆಯ ಬಣ್ಣ ಕೆಂಪು ಬಣ್ಣದಾಗಿದ್ದು ಅದು ಚಾಸಾ-2 ರವರಿಗೆ ಸೇರಿದ್ದು, ಅದನ್ನು ಗಲಾಟೆಯಾದ ದಿನವೇ ಪೊಲೀಸ್ ರವರಿಗೆ ನೀಡಿರುತ್ತಾರೆ. ಸದರಿ ರವಿಕೆ ಯಾವ ಭಾಗದಲ್ಲಿ ಹರಿದಿರುತ್ತದ ಎಂದು ನನಗೆ ಹೇಳಲು ಆಗುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**19**. ಚಾಸಾ.9/ಪ್ರಾಸಾ.5 ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 15.09.2017 ರಂದು ಸದರಿ ಕೇಸ್ ನ ಕಡತವನ್ನು ಚಾಸಾ-8 ರವರಿಂದ ಪಡೆದು ಪರಿಶೀಲನೆ ಮಾಡಿದ್ದು, ನಂತರ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1, 5, 6 ರವರ ಸಮಕ್ಷಮ ಬೆಳಿಗ್ಗೆ 10.00 ರಿಂದ 10.45ವರಿಗೂ ಮಹಜರ್ ನ್ನು ಜರುಗಿಸಿ ಒಂದು ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡು ಠಾಣಾ ಮಾಲುಪಟ್ಟಿಯಲ್ಲಿ ನಮೂದು ಮಾಡಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು. ಅದೇ ದಿನ ಬೆ 11.30 ರಿಂದ 12.30 ವರಿಗೂ ಚಾಸಾ-1ರವರ ಮನೆಯ ಮುಂದೆ, ಚಾಸಾ-2, 5, 6

ರವರ ಸಮಕ್ಷಮ ಅಮಾನತ್ತು ಮಹಜರ್ ನ್ನು ಜರುಗಿಸಿ ಕಲ್ಲು, ಹಸಿರು ಬಣ್ಣದ ರವಿಕೆ, ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡು ಠಾಣಾ ಮಾಲುಪಟ್ಟಿಯಲ್ಲಿ ನಮೂದು ಮಾಡಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು. ಸಾಕ್ಷಿದಾರರ ಹೇಳಿಕೆಯನ್ನು ಪಡೆಯಲಾಯಿತು. ದಿನಾಂಕಃ 20.09.2017 ರಂದು ಚಾಸಾ-1, 2 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ದಿಃ 09.10.2017 ರಂದು ಆರೋಪಿತರು ಠಾಣೆಗೆ ಹಾಜರಾಗಿದ್ದು ಅವರಿಗೆ ನೋಟಿಸ್ ನೀಡಿ ಉತ್ತರ ಪಡೆದಿರುತ್ತೇನೆ. ನಂತರ ತನಿಖೆ ಪೂರ್ಣಗೊಂಡ ಕಾರಣ ಚಾಸಾ-1ರವರ ಬಾಗಿಲು ನಷ್ಟವಾಗದ ಕಾರಣ ಐಪಿಸಿ 427 ನ್ನು ಕೈಬಿಟ್ಟು ಆರೋಪಿತರ ವಿರುದ್ದ ಅಂತಿಮ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಸಾಕ್ಷಿಯು ನಿಪಿ-2, 3, 4, 5 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಸಿ) ನಿಪಿ-3(ಸಿ), ನಿಪಿ-4(ಬಿ), ನಿಪಿ-5(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಹಾಗೂ ಮುಮಾ-1 ನ್ನು ನೋಡಿ ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**20**. ಪ್ರಾಸಾ 5 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲಿಗೊಳಪಡಿಸಿದ್ದು, ಅದೇ ದಿನ ನಾನು ಚಾಸಾ-1 ರಿಂದ 3 ರವರ ವಿರುದ್ದ ಅಂತಿಮ ಪಟ್ಟಿಯನ್ನು ದಾಖಲು ಮಾಡಿರುತ್ತೇನೇ ಎಂದರೆ ಸರಿ. ಆರೋಪಿತರನ್ನು ಹಾಗೂ ಚಾಸಾ-1 ರಿಂದ 3 ರವರ ಸಿವಿಲ್ ವ್ಯಾಜ್ಯಾ ಇದ್ದು ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಸರಿ. ನನ್ನ ತನಿಖಾ ಕಾಲದಲ್ಲಿ ಘಟನ ಸ್ಥಳಕ್ಕೆ ಮರುದಿನ ಭೇಟಿ ನೀಡಿರುತ್ತೇನೆ. ಮಹಜರ್ ನ್ನು ಮನೆಯ ಬಳಿ ಮಾಡಿದ್ದು, ಜಮೀನಿನ ಬಳಿ ಜರುಗಿಸಿರುವುದಿಲ್ಲ. ಮುಮಾಗಳನ್ನು ಚಾಸಾ-2ರವರು ತಂದು ಹಾಜರು ಮಾಡಿರುತ್ತಾರೆ. ಚಾಸಾ-2ರವರು ಕಲ್ಲು ಮತ್ತು ದೊಣ್ಣೆಯನ್ನು ಅಲ್ಲೇ ಬಿದಿತ್ತು ಎಂದು ತಂದು ಕೊಟ್ಟಿದ್ದು ರವಿಕೆಯನ್ನು ಮನೆಯಿಂದ ತಂದು ಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ನುದಿಡಿರುತ್ತಾರೆ.

**21**. ಚಾಸಾ.4/ಪ್ರಾಸಾ.6 ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ಸುಮಾರು 2014 ರಲ್ಲಿ ಗಾರೆ ಕೆಲಸಕ್ಕೆ ಚಾಸಾ-2ರವರ ಮನೆಗೆ ಹೋಗಿದ್ದು, ಅಷ್ಟರಲ್ಲಿ ಅವರು ಜಮೀನಿನ ಬಳಿ ಗಲಾಟೆ ಮಾಡಿಕೊಂಡು ಬಂದಿದ್ದು ಮ 12.00 ಗಂಟೆಯ ಸಮಯದಲ್ಲಿ ಚಾಸಾ-1, 2 ರವರಿಗೆ 1ನೇ ಮತ್ತು 4ನೇ ಆರೋಪಿತರು ಕಲ್ಲು ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. ನಂತರ ನಾನು ಮತ್ತು ಶಿವಣ್ಣ ರವರು ಜಗಳ ಬಿಡಿಸಿರುತ್ತೇವೆ. ಸದರಿ ವಿಚಾರದ ಮೇರೆಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ಮುಮಾ-1 ಹಾಗೂ ಆರೋಪಿತರನ್ನು ನೋಡಿ ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**22**. ಪ್ರಾಸಾ 6 ರವರನ್ನು ಮಾನ್ಯ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೊಳಪಡಿಸಿದ್ದು, ದಿ:13.09.2017 ರಂದು ಗಲಾಟೆ ನಡೆದಿರುತ್ತದೆ ಎಂದರೆ ಸರಿ. ಚಾಸಾ-1 ರವರ ಮನೆಯ ಮುಂದೆ ಆರೋಪಿತರು ಬಂದು ಅವಾಚ್ಯ ಶಬ್ದದಿಂದ ಬೈದು 1ನೇ ಆರೋಪಿ ಚಾಸಾ-2ರವರಿಗೆ ದೊಣ್ಣೆಯಿಂದ ಹಲ್ಲೆ ಮಾಡಿದ್ದರು ಎಂದರೆ ಸರಿ. ಉಳಿದ ಆರೋಪಿತರು ಚಾಸಾ-2ರವರನ್ನು ಇಳಿದು ಎಳೆದಾಡಿದರು ಎಂದರೆ ಸರಿ. 4ನೇ ಆರೋಪಿ ಚಾಸಾ-2ರವರ ರವಿಕೆಯನ್ನು ಹರಿದು ಹಾಕಿದ್ದರು ಎಂದರೆ ಸರಿ. 2ನೇ ಆರೋಪಿ ಚಾಸಾ-1ರವರ ಮನೆಯ ಮುಂಭಾಗಕ್ಕೆ ಕಲ್ಲಿನಿಂದ ಹೊಡೆದರು ಎಂದರೆ ಸರಿ. ನಾನು ಮತ್ತು ಚಾಸಾ-3ರವರು ಜಗಳ ಬಿಡಿಸಿದ್ದೇವು ಎಂದರೆ ಸರಿ. ಕೊಲೆ ಬೆದರಿಕೆ ಹಾಕಿದ್ದರು ಎಂದರೆ ಸರಿ. ಜಮೀನಿನ ವಿಚಾರವಾಗಿ ಗಲಾಟೆ ಮಾಡಿರುತ್ತಾರೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಚಾಸಾ-1, 2 ರವರು ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**23**. ಪ್ರಾಸಾ 6 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲಿಗೊಳಪಡಿಸಿದ್ದು, ಚಾಸಾ-1 ಮತ್ತು 2 ರವರು ನನ್ನನ್ನು ಮನೆಯ ಕಟ್ಟುವಂತೆ

ಕರೆದಿರುತ್ತಾರೆ. ಗಲಾಟೆಯ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ಗಲಾಟೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ಹೇಳಿಕೆಯಲ್ಲಿ ಇರುವ ವಿಚಾರ ಗೊತ್ತಿಲ್ಲ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**24**. ಚಾಸಾ.8/ಪ್ರಾಸಾ.7 ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ **14.09.2017** ರಂದು ಬೆಳಿಗ್ಗೆ **8.45** ರಲ್ಲಿ ನಾನು ಠಾಣೆಯಲ್ಲಿ ಇರುವಾಗ ಸರ್ಕಾರಿ ಆಸ್ಪತ್ರೆಯಿಂದ ಮೆಮೋ ಪಡೆದು, ಆಸ್ಪತ್ರೆಗೆ ಹೋಗಿ ಬರುವಂತೆ ಹೇಳಿದ್ದು, ಅದರಂತೆ ಗಾಯಾಳುವಾದ ಚಾಸಾ-**1**ರವರ ಹೇಳಿಕೆಯನ್ನು ಬೆ **9.15** ರಿಂದ **9.45** ವರಿಗೂ ಪಡೆದು ವಪಾಸ್ಸು ಠಾಣೆಗೆ ಬಂದು ಪ್ರ.ವ.ವರದಿಯನ್ನು ದಾಖಲು ಮಾಡಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗೆ ನಿವೇದಿಸಿಕೊಂಡಿರುತ್ತೇನೆ ಹಾಗೂ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-**9** ರವರಿಗೆ ನೀಡಿರುತ್ತೇನೆ. ಸಾಕ್ಷಿಯು ನಿಪಿ-1ರಲ್ಲಿ ಸಾಕ್ಷಿಯು ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಗಿದೆ. ಪ್ರ.ವ.ವರದಿಯನ್ನು ನಿಪಿ-6 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**25**. ಪ್ರಾಸಾ 7 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲಿಗೊಳಪಡಿಸಿದ್ದು, ತಮ್ಮ ಪರವಾಗಿ ಯಾವುದೇ ಅಂಶಗಳನ್ನು ಹೊರತಂದಿರುವುದಿಲ್ಲ.

**26**. ಚಾಸಾ.6/ಪ್ರಾಸಾ.8 ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ಈಗ ನೋಡುತ್ತಿರುವ ಸಹಿಯು ನನ್ನದಾಗಿರುತ್ತದೆ. ನಿಪಿ-**2** ಮತ್ತು **3** ಕ್ಕೆ **4** ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ಪೊಲೀಸ್ ರವರು ಮಹಜರ್ ನ್ನು ಜರುಗಿಸಿಸಲು ಬಂದಿದ್ದಾಗ ಸಹಿ ಮಾಡಿದ್ದು ನನ್ನ ಜೊತೆಗೆ ಚಾಸಾ-**5**ರವರು ಸಹಿ ಮಾಡಿದ್ದು, ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ನಿಪಿ-**2**, **3** ರಲ್ಲಿ ಇರುವ ಸಹಿಯನ್ನು ಗುರುತಿಸಿದ್ದು ಅವುಗಳನ್ನು ನಿಪಿ-**2**(ಡಿ), ನಿಪಿ-**3**(ಡಿ)

ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**27**. ಪ್ರಾಸಾ 8 ರವರನ್ನು ಮಾನ್ಯ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೊಳಪಡಿಸಿದ್ದು, ಸದರಿ ಮಹಜರ್ ನ್ನು ಬೆಳಿಗ್ಗೆ **10.00** ರಿಂದ **11.00** ವರಿಗೂ ಮಾಡಿದ್ದು, ನನ್ನ ಜೊತೆ ಚಾಸಾ-**1** ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**28**. ಪ್ರಾಸಾ 8 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲಿಗೊಳಪಡಿಸಿದ್ದು, ಮಹಜರ್ ಗಳಲ್ಲಿ ಇರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸ್ ರವರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಮುಮಾಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸದರಿ ಮಹಜರ್ ಗೆ ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ಗೊತ್ತಿಲ್ಲ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**29**. ಚಾಸಾ.3/ಪ್ರಾಸಾ.9 ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ಆರೋಪಿತರು ಗೊತ್ತು. ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಗಲಾಟೆಯನ್ನು ನೋಡಿರುವುದಿಲ್ಲ ಮತ್ತು ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**30**. ಪ್ರಾಸಾ 9 ರವರನ್ನು ಮಾನ್ಯ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೊಳಪಡಿಸಿದ್ದು, ತಮ್ಮ ಪರವಾಗಿ ಯಾವುದೇ ಅಂಶಗಳನ್ನು ಹೊರತಂದಿರುವುದಿಲ್ಲ.

**31.** ಒಟ್ಟಾರೆಯಾಗಿ ಅಭಿಯೋಜನೆಯ ಪ್ರಕರಣವನ್ನು ರುಜುವಾತುಪಡಿಸಲು ಪ್ರಾಸಾ 1 ರಿಂದ 9 ರವರ ಸಾಕ್ಷ್ಯ ಹಾಗೂ ನಿಪಿ 1 ರಿಂದ 7 ಬಹಳ ಬಹುಮುಖ್ಯವಾಗಿದ್ದು, ಪ್ರಾಸಾ 1 ರವರು ಪ್ರಾಸಾ 2 ರವರ ಗಂಡನಾಗಿದ್ದು,

ದೂರುದಾರರು ಮತ್ತು ಗಾಯಾಳು ಆಗಿದ್ದು, ಪ್ರಾಸಾ 2 ರವರು ಪ್ರಾಸಾ 1 ರವರ ಹೆಂಡತಿ ಮತ್ತು ಸದರಿಯವರು ಗಾಯಾಳು ಆಗಿದ್ದು, ಆರೋಪಿತರು ಕಲ್ಲು, ದೊಣ್ಣೆಯಿಂದ ಹಲ್ಲೆ ಮಾಡಿದ್ದು, 5 ನೇ ಆರೋಪಿ ಕುತ್ತಿಗೆಗೆ ಹೊಡೆದಿದ್ದು, ಉಳಿದ ಆರೋಪಿತರು ಕಲ್ಲಿನಿಂದ ಮೈಕೈಗೆ ಹೊಡೆದಿರುತ್ತಾರೆ. 2 ನೇ ಆರೋಪಿ ಪ್ರಾಸಾ 2 ರವರಿಗೆ ಕಲ್ಲಿನಿಂದ ಮೈಕೈಗೆ ಹೊಡೆದಿರುತ್ತಾರೆ. ಆರೋಪಿತರು ತಮ್ಮ ವಿರುದ್ದ ಇದೇ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದು ತಮ್ಮ ಮತ್ತು ಆರೋಪಿತರ ನಡುವೆ ಸಿವಿಲ್ ದಾವೆ ನಡೆಯುತ್ತಿದೆ. ನಿಪಿ1 ಮತ್ತು 2 ರಲ್ಲಿನ ವಿಚಾರಗಳನ್ನು ಓದಿ ತಿಳಿದುಕೊಂಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸ-2 ರವರು ಮುಂದುವರೆದು, ನಿಪಿ 3 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ಹಲ್ಲೆಯಿಂದ ತನಗೆ ರಕ್ತ ಗಾಯವಾಗಿತ್ತು. ರಕ್ತವಾಗಿರುವ ಬಟ್ಟೆಗಳನ್ನು ಪೋಲೀಸರಿಗೆ ನೀಡಿರುವುದಿಲ್ಲ. ಮುದ್ದಾ ಮಾಲುಗಳು ಹಳ್ಳಿಗಳಲ್ಲಿ ಸಿಗುತ್ತವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**32.** ಪ್ರಾಸಾ 3 ರವರು ವೈದ್ಯರಾಗಿದ್ದು, ಪ್ರಾಸಾ 1 ಮತ್ತು 2 ರವರಿಗೆ ಚಿಕಿತ್ಸೆ ನೀಡಿದ್ದು, ಪ್ರಾಸಾ 1 ರವರಿಗೆ ಎದೆಯ ಮೂಳೆ ಭಾಗದಲ್ಲಿ ಮುಟ್ಟಿದಾಗ ನೋವು ಕಡಬಂದಿರುತ್ತವೆ. ಪ್ರಾಸಾ 2 ರವರಿಗೆ ಎಡ ಮತ್ತು ಬಲ ಮುಂಗೈ ಲ್ಲಿ ತರಚಿದ ಗಾಯಗಳ ಕಂಡಬುಂದಿರುತ್ತದೆ. ಸದರಿ ಗಾಯಗಳ ಆಯಸ್ಸು ಮತ್ತು ಬಣ್ಣವನ್ನು ನಮೂದು ಮಾಡಿಲ್ಲ. ಜಮೀನಿನಲ್ಲಿ ಕೆಲಸ ಮಾಡುವಾಗ ಪೊದೆಯ ಮೇಲೆ ಬಿದ್ದಾಗ ಮತ್ತು ಗಟ್ಟಿಯಾದ ನೆಲದ ಮೇಲೆ ಬಿದ್ದಾಗ ಪ್ರಾಸಾ 1 ಮತ್ತು 2 ರವರು ಹೇಳಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ.

**33.** ಅದೇರೀತಿ, ಪ್ರಾಸಾ 1 ಮತ್ತು 2 ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿರುವ ಗಾಯಗಳು ಮತ್ತು ನಿ.ಪಿ 1 ರಲ್ಲಿ ಹೇಳಿರುವಂತೆ ಹಲ್ಲೆಗಾಯಗಳು ಕಂಡುಬಂದಿರುವುದಿಲ್ಲ. ಅಲ್ಲದೇ, ನಿಪಿ-4 ಮತ್ತು 5 ರಲ್ಲಿ ಪ್ರಾಸ 1 ಮತ್ತು 2

ರವರಿಗೆ ಎಲ್ಲಿ, ಯಾವ ವಸ್ತುವಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ನಮೂದು ಮಾಡಿರುವುದಿಲ್ಲ. ಆದುದರಿಂದ, ಅಭಿಯೋಜನೆಯ ನಿಲುವಿನಂತೆ ಮುದ್ದಾ ಮಾಲುಗಳಿಂದ ಪ್ರಾಸಾ 1 ಮತ್ತು 2 ರವರಿಗೆ ಆರೋಪಿತರು ಹಲ್ಲೆ ಮಾಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂಬುವುದಾಗಿ ನಿರ್ಣಯಿಸಲು ಬರುವುದಿಲ್ಲ.

**34.** ಪ್ರಾಸಾ 4 ಮತ್ತು 8 ರವರು ನಿಪಿ 2 ಮತ್ತು 3 ರ ಮುದ್ದಾ ಮಾಲು 1 ರಿಂದ 4 ರ ಪಂಚಾರಾಗಿದ್ದು, ಪ್ರಾಸಾ 4 ರವರು ಗಲಾಟೆಯಾದ ದಿನವೇ ಪೋಲಿಸರು ಪಂಚನಾಮೆಗಳನ್ನು ಜರುಗಿಸಿ, ಮುದ್ದಾ ಮಾಲುಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ. ನಿಪಿ-2 ಮತ್ತು 3 ನ್ನು ಜರುಗಿಸಿ ಜಮೀನಿನ ಸ. ನಂಬರ್ ಗೊತ್ತಿಲ್ಲ. ಅವುಗಳಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ. ಮುದ್ದಾ ಮಾಲುಗಳ ಮೇಲೆ ವಿಶೇಷ ಗುರುತನ್ನು ಇಟ್ಟು ಕೊಂಡಿರುವುದಿಲ್ಲ ಎಂದು ನಿಪಿ 2 ಮತ್ತು 3 ಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸ- 8 ರವರು ತನ್ನ ಮುಂದೆ ಮುದ್ದಾ ಮಾಲುಗಳನ್ನು ಅಮಾನತುಪಡಿಸಿಕೊಂಡಿಲ್ಲ, ನಿಪಿ 2 ಮತ್ತು 3 ರಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ ಮತ್ತು ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದು ನಿಪಿ 2 ಮತ್ತು 3 ಮುದ್ದಾ ಮಾಲುಗಳ ವಿರುದ್ಧ ಮತ್ತು ಪ್ರಾಸಾ 5 ರವರ ಸಾಕ್ಷ್ಯಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುತ್ತಾರೆ.

**35.** ಪ್ರಾಸಾ 5 ರವರು ನಿಪಿ 2 ರಿಂದ 5 ನ್ನು ಜರುಗಿಸಿದ್ದು, ಮುದ್ದಾ ಮಾಲುಗಳನ್ನು ಅಮಾನತುಪಡಿಸಿಕೊಂಡಿದ್ದು, ಅಂತಿಮ ಪಟ್ಟಿಯನ್ನು ಸಲ್ಲಿಸಿದ್ದು ಅದಕ್ಕೆ ಪೂರಕವಾಗಿ ಸಾಕ್ಷ ನುಡಿದಿರುತ್ತಾರೆ. ಸದರಿಯವರು ಸಾಕ್ಷ್ಯವು ಅಭಿಯೋಜನೆಗೆ ಸಹಕಾರಿಯಾಗುವುದಿಲ್ಲ.

**36.** ಪ್ರಾಸಾ 6 ಮತ್ತು 9 ರವರು ಪ್ರತ್ಯಕ್ಷದರ್ಶಿಯಾಗಿದ್ದು, ಸದರಿಯವರು ತನಗೆ ಘಟನೆಯ ಬಗ್ಗೆ ಗೊತ್ತಿಲ್ಲ ಮತ್ತು ಕಣ್ಣಾರೆ ನೋಡಿರುವುದಿಲ್ಲ. ತನ್ನ ಹೇಳಿಕೆ

ಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಆದುದರಿಂದ, ಸದರಿಯವರು ಘಟನೆಯನ್ನು ನೋಡಿರುವುದಿಲ್ಲ ಮತ್ತು ಜಗಳವನ್ನು ಬಿಡಿಸಿರವುದಿಲ್ಲ ಎಂಬುವುದು ಸ್ಪಷ್ಟವಾಗುತ್ತದೆ.

**37.** ಪ್ರಾಸಾ 7 ರವರು ಪೋಲಿಸ್ ಅಧಿಕಾರಿಯಾಗಿದ್ದು, ಸದರಿಯವರು ಪ್ರಾಸಾ 1 ರವರಿಂದ ಹೇಳಿಕೆ ಪಡೆದು ಪ್ರಕರಣ ದಾಖಲು ಮಾಡಿಕೊಂಡು ಅದಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿಯವರು ಪ್ರತ್ಯಕ್ಷದರ್ಶಿ ಸಾಕ್ಷಿಯಾಗಿರುವುದಿಲ್ಲ. ಆದುದರಿಂದ ಅಭಿಯೋಜನೆಗೆ ಸಹಕಾರಿಯಾಗುವುದಿಲ್ಲ.

**38.** ಈಗಾಗಲೇ ಚರ್ಚಿಸಿರುವಂತೆ ಪ್ರಾಸಾ 1 ಮತ್ತು 2 ರವರ ಸಾಕ್ಷ್ಯವು ಒಂದಕ್ಕೊಂದು ಪೂರಕವಾಗಿರದೇ ತದ್ವಿರುದ್ಧವಾಗಿರುತ್ತದೆ. ಅಲ್ಲದೇ, ಪ್ರಾಸಾ 1 ಮತ್ತು 2 ರವರು ಗಂಡ ಹೆಂಡತಿಯಾಗಿದ್ದು, ಹಿತಾಸಕ್ತಿಯುಳ್ಳ ಸಾಕ್ಷಿದಾರರಾಗಿದ್ದು, ಪ್ರತ್ಯಕ್ಷ ದರ್ಶಿ ಸಾಕ್ಷಿಗಳಾದ ಪ್ರಾಸಾ 6 ಮತ್ತು 9 ರವರು ಸದರಿಯವರು ಸಾಕ್ಷ್ಯ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೇ, ಅಭಿಯೋಜನೆಯು ತನ್ನ ನಿಲುವಿನಂತೆ ಆರೋಪಿತರು ಗುಂಪು ಕಟ್ಟಿಕೊಂಡು, ಪ್ರಾಸಾ 1 ರವರನ್ನು ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ಬೈದು ಮುದ್ದಾ ಮಾಲುಗಳಿಂದ ಹಲ್ಲೆ ಮಾಡಿದ್ದು, ಆಗ ಪ್ರಾಸಾ 9 ರವರು ಜಗಳ ಬಿಡಿಸಿದ್ದು, ನಂತರ 4 ಗಂಟೆಗೆ ಮನೆಯ ಬಳಿ ಹೋಗಿ ಪ್ರಾಸಾ 2 ರವರೊಂದಿಗೆ ಜಗಳ ತೆಗೆದು, ಕೈ ನಲ್ಲಿ ಹಲ್ಲೆ ಮಾಡಿ, ಮುದ್ದಾ ಮಾಲುಗಳಿಂದ ಹಲ್ಲೆ ಮಾಡಿ ರವಿಕೆಯನ್ನು ಹರಿದು ಹಾಕಿ, ಅವಾಚ್ಯ ಶಬ್ದಗಳಿಂದ ಬೈದಿದ್ದು, ಗಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂಬುವುದನ್ನು ಸಾಕ್ಷ್ಯಧಾರಗಳ ಮೂಲಕ ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡುತ್ತಾ, ಆರೋಪಿತರನ್ನು ನಿರ್ದೋಷಿಗಳು ಎಂದು ತೀರ್ಮಾನಿಸಿ ಮೇಲ್ಕಂಡ ಅಂಶ 1

ರಿಂದ 6 ಅನ್ನು **ನಕಾರಾತ್ಮಕವಾಗಿ** ಎಂದು ಉತ್ತರಿಸಲಾಗಿದೆ.

**39**. **ಅಂಶ ಸಂಖ್ಯೆ ಃ** 7 ಃ- ಅಂಶ ಸಂಖ್ಯೆ 1 ರಿಂದ 6 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿರುತ್ತದೆ.

ಃಃ **ಆದೇಶ** ಃಃ

ದಂ.ಪ್ರ.ಸಂ. ಕಲಂ 248(1) ರನ್ವಯ ಆರೋಪಿತರುಗಳು **ಭಾ.ದಂ.ಸಂ.**ಕಲಂ.143, 341, 504, 323, 324, ಮತ್ತು 506 ಸಹವಾಚಕ ಕಲಂ 149 ರಡಿಯಲ್ಲಿ ದಂಡಿಸಬಹುದಾದ ಅಪರಾಧಗಳಿಂದ ನಿರ್ದೋಷಿಗಳೆಂದು ಘೋಷಿಸಿ ಬಿಡುಗಡೆ ಮಾಡಲಾಗಿರುತ್ತದೆ.

ಆರೋಪಿತರುಗಳ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳು ಇಂದಿನಿಂದ 6 ತಿಂಗಳವರೆಗೆ ಮುಂದುವರೆಯತಕ್ಕದ್ದು.

ಎಂ.ಒ. ನಂ.1 ರಿಂದ 4 ಬೆಲೆರಹಿತಗಳಾಗಿದ್ದು, ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ನೇರವಾಗಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ಬಹಿರಂಗ ನ್ಯಾಯಾಲಯದಲ್ಲಿ ಇಂದು ದಿನಾಂಕ: **23ನೇ ಜೂನ್ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಪುರುಷೋತ್ತಮ.ಟಿ.ಪಿ)**
1 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.

## ಪರಿಚ್ಛೇದ

1. ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ ಃ

ಪ್ರಾಸಾ.1 ಃ ಹೊನ್ನೇಗೌಡ
ಪ್ರಾಸಾ.2 ಃ ರೇಣುಕಾ
ಪ್ರಾಸಾ.3 ಃ ಡಾಃ ಯೋಗೇಶ
ಪ್ರಾಸಾ.4 ಃ ಅಶೋಕ
ಪ್ರಾಸಾ.5 ಃ ಕುಸುಮ
ಪ್ರಾಸಾ.6 ಃ ಶ್ರೀನಿವಾಸ
ಪ್ರಾಸಾ.7 ಃ ಉಮೇಶ
ಪ್ರಾಸಾ.8 ಃ ದೇವರಾಜು
ಪ್ರಾಸಾ.9 ಃ ಕಮಲಮ್ಮ

2. ಅಭಿಯೋಜನೆಯ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ ಃ

ನಿಪಿ.1 ಃ- ದೂರು
ನಿಪಿ.1(ಎ-ಬಿ) ಃ ಸಹಿ
ನಿಪಿ.2 ಃ- ಕೃತ್ಯಸ್ಥಳ ಮಹಜರ್
ನಿಪಿ.2(ಎ-ಡಿ) ಃ ಸಹಿ
ನಿಪಿ.3 ಃ- ಕೃತ್ಯಸ್ಥಳ ಮಹಜರ್
ನಿಪಿ.3(ಎ-ಡಿ) ಃ ಸಹಿ
ನಿಪಿ.4 ಃ- ಗಾಯದ ಪ್ರಮಾಣ ಪತ್ರ
ನಿಪಿ.4(ಎ) ಃ ಸಹಿ
ನಿಪಿ.5 ಃ- ಗಾಯದ ಪ್ರಮಾಣ ಪತ್ರ
ನಿಪಿ.5(ಎ) ಃ ಸಹಿ
ನಿಪಿ.6 ಃ- ಪ್ರಥಮ ವರ್ತ ಮಾನ ವರದಿ
ನಿಪಿ.6(ಎ) ಃ ಸಹಿ
ನಿಪಿ.7 ಃ- ಪ್ರಾಸಾ 9 ರವರ ಹೇಳಿಕೆ

3. ಆರೋಪಿ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ ಃ

ಇಲ್ಲ

4. ಆರೋಪಿ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ ಃ

ಇಲ್ಲ

5. ಮುದ್ದೆ ಮಾಲುಗಳ ಪಟ್ಟಿ ಃ

| | | |
|---|---|---|
| ಎಂ.ಒ. 1&2 | ಃ | ದೊಣ್ಣೆಗಳು |
| ಎಂ.ಒ. 3 | ಃ | ಕಲ್ಲು |
| ಎಂ.ಒ. 4 | ಃ | ರವಿಕೆ |

**(ಪುರುಷೋತ್ತಮ ಟಿ.ಪಿ)**
1 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.